(ಇಂದು ದಿನಾಂಕಃ 12–03–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ-

1) ನಾನು ಬಿಎ ಪದವಿ ಹೊಂದಿರುತ್ತೇನೆ. ನನ್ನ ಜನನ ದಿನಾಂಕ 19-11-1998 ಇರುತ್ತದೆ. ನನ್ನ ಮೂಲ ಅಜ್ಜನ ಹೆಸರು ಹನುಮಪ್ಪ ಅಲ್ಲಮ್ಮನವರ ಇರುತ್ತದೆ. ನನ್ನ ಅಜ್ಜನ ಹೆಂಡತಿಯ ಹೆಸರು ಬೀಮಮ್ಮ. ಸದರಿಯವರಿಗೆ ಅಡಿವೆಮ್ಮ ಎನ್ನುವ ಒಬ್ಬಳೇ ಹೆಣ್ಣು ಸಂತಾನ. ಅಡಿವೆಮ್ಮ ರವರು ವಿವಾಹಿತರು. ಆಕೆಯ ಗಂಡನ ಹೆಸರು ಫಕ್ಕೀರಪ್ಪ ಉಡಚ್ಚನ್ನವರ. ಫಕ್ಕೀರಪ್ಪ ಹಾಗೂ ಅಡಿವೆಮ್ಮ ರವರಿಗೆ ಬಸಪ್ಪ, ಲಕ್ಷ್ಮಣ, ರವಿ ಎನ್ನುವ ಗಂಡು ಮಕ್ಕಳು ಮಂಜವ್ವ, ಶಿವಗಂಗವ್ವ ಹಾಗೂ ಸುವರ್ಣ ಎನ್ನುವ ಹೆಣ್ಣು ಮಕ್ಕಳು ಒಟ್ಟು 6 ಜನ ಮಕ್ಕಳು ಇರುತ್ತಾರೆ. ಸದರಿಯವರಲ್ಲಿ ನನ್ನ ತಂದೆಯಾದ ಬಸಪ್ಪ ರವರು ಮಾತ್ರ ಮರಣ ಹೊಂದಿರುತ್ತಾರೆ.

2) ನನ್ನ ತಂದೆಯವರು 2007 ರಲ್ಲಿ ಧಾರವಾಡದ ಕೀಮ್ಸ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ದಾವಾ ಸಲ್ಲಿಸುವ ಪೂರ್ವದಲ್ಲಿ ಎಲ್ಲಾ ದಾಖಲೆಗಳನ್ನು ನಾನು ತೆಗೆಸಿ, ಓದಿ ಪರಿಶೀಲನೆ ಮಾಡಿರುತ್ತೇನೆ. ನಿಂಗವ್ವ ಕೋಂ ಶಿವಪ್ಪ ತಳವಾರ ನನ್ನ ಹೆಣ್ಣಜ್ಜಿಯಾಗಬೇಕು. ನಿಂಗವ್ವ ಕೋಂ ಶಿವಪ್ಪ ತಳವಾರ ಹಾಗೂ ಹನುಮಪ್ಪ ಮಲ್ಲಪ್ಪ ತಳವಾರ ರವರ ನಡುವೆ ಸಂಬಂದ ಗೊತ್ತಿಲ್ಲ. ಸರ್ವೆ ಸಂಖ್ಯೆ 424/1 ಕ್ಷೇತ್ರ 1 ಎಕ್ರೆ 23 ಗುಂಟೆ ಹಾಗೂ 451 ಕ್ಷೇತ್ರ 19 ಎಕ್ರೆ 15 ಗುಂಟೆ ಆಸ್ತಿಗಳು ಮೊದಲು ನಿಂಗವ್ವ ಕೋಂ ಶಿವಪ್ಪ ತಳವಾರ ಹಾಗೂ ಹನುಮಪ್ಪ ಮಲ್ಲಪ್ಪ ತಳವಾರ ರವರ ಹೆಸರಿನಲ್ಲಿ ಜಂಟಿಯಾಗಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಿಂಗವ್ವ ಕೋಂ ಶಿವಪ್ಪ ತಳವಾರ ರವರ ಹೆಸರಿನಲ್ಲಿದ್ದ ಬಗ್ಗೆ ಗೊತ್ತಿರುತ್ತದೆ.

3) ಸರ್ವೆ ಸಂಖ್ಯೆ 424/1 ಹಾಗೂ 451 ಆಸ್ತಿಗಳು ನಿಂಗವ್ವ ಕೋಂ ಶಿವಪ್ಪ ತಳವಾರ ಹಾಗೂ ಹನುಮಪ್ಪ ಮಲ್ಲಪ್ಪ ತಳವಾರ ರವರ ಹೆಸರಿನಲ್ಲಿ ಹೇಗೆ ಬಂದಿರುತ್ತದೆ ಎಂದು ನಾನು ನೋಡಿರುತ್ತೇನೆ. ಸದರಿ ದಾಖಲೆಯನ್ನು ನಾನು ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ಈಗ ತಾವು ಹಾಜರು ಪಡಿಸಿದ ದಾಖಲೆಗಳನ್ನು ನೀಡಿ, ಸಾಕ್ಷಿಯು ಎರಡೂ ನಿಮಿಷಗಳ ಕಾಲ ಪರಿಶೀಲಿಸಿ ನಾನು ವಕೀಲರಿಗೆ ನೀಡಿರುತ್ತೇನೆ ನ್ಯಾಯಾಲಯದ ಎದುರು ಇರುವುದಿಲ್ಲ ಎಂದು ನುಡಿಯುತ್ತಾರೆ. ಬಸವರಾಜ ಫಕ್ಕೀರಪ್ಪ ಉಡಚನ್ನನವರ ನನ್ನ ತಂದೆ.

4) ಸರ್ವೆ ಸಂಖ್ಯೆ 451 ಕ್ಷೇತ್ರ 19 ಎಕ್ರೆ 15 ಗುಂಟೆ ಬಸವರಾಜ ಫಕ್ಕೀರಪ್ಪ ಉಡಚನ್ನನವರ ರವರ ಹೆಸರಿನಲ್ಲಿ ನಮೂದು ಇತ್ತು ಎಂದರೆ ಸರಿ. ಪ್ರಸ್ತುತ ದಾವೆ ಸಲ್ಲಿಸುವ ಸಮಯದಲ್ಲಿ ಸದರಿ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆಯ ಮರಣದ ನಂತರ ಆಸ್ತಿಗಳಲ್ಲಿ ನಮ್ಮ ಹೆಸರುಗಳನ್ನು ವಾರಸಾನಾತೆಗಳಿಗೆ ನಮೂದು

ಮಾಡಿಕೊಳ್ಳಲು ಅರ್ಜಿ ನೀಡಿರುತ್ತೇವೆ. ಸರ್ವೆ ಸಂಖ್ಯೆ 451 ನನ್ನ ತಂದೆಗೆ ಅವರ ತಂದೆಯಿಂದ ಬಂದಿರುತ್ತದೆ. ಸರ್ವೆ ಸಂಖ್ಯೆ 424/1 ಕ್ಷೇತ್ರ 1 ಎಕ್ರೆ 23 ಗುಂಟೆ ಪ್ರಸ್ತುತ ದಾವೆಯ ದಾವಾ ಆಸ್ತಿ ಎಂದರೆ ಸರಿ.

5) ಬಸವರಾಜ ಫಕ್ಕೀರಪ್ಪ ಉಡಚನ್ನನವರ ಹಾಗೂ ಹನುಮಪ್ಪ ಮಲ್ಲಪ್ಪ ತಳವಾರ ರವರ ನಡುವೆ ಯಾವುದೇ ಸಂಬಂದವಿರುವುದಿಲ್ಲ. ಡ ಸಂಖ್ಯೆ 8135 ರ ಅನುಸಾರ ದಾವಾ ಆಸ್ತಿಯು ಹನುಮಪ್ಪ ಮಲ್ಲಪ್ಪ ತಳವಾರ ರವರ ಹೆಸರಿನಲ್ಲಿ 1983 ರಲ್ಲಿ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಹನುಮಪ್ಪ ಮಲ್ಲಪ್ಪ ತಳವಾರ ರವರು ಯಾರು ಎಂದು ನನಗೆ ಗೊತ್ತಿಲ್ಲ. 424/1 ಕ್ಷೇತ್ರ 1 ಎಕ್ರೆ 23 ಗುಂಟೆ ಆಸ್ತಿಗೆ ಹನುಮಪ್ಪ ಮಲ್ಲಪ್ಪ ತಳವಾರ ರವರ ಹೆಸರು ಯಾವ ಆದಾರದ ಮೇಲೆ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಅದು ನನ್ನ ತಂದೆಯವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6) ದಾವಾ ಆಸ್ತಿಯು ನಮ್ಮ ತಂದೆಯವರೆಗೆ ಯಾವ ರೀತಿಯಲ್ಲಿ ಹೆಸರು ಬದಲಾವಣೆಯಾಗಿರುತ್ತದೆ ಎನ್ನುವುದರ ಬಗ್ಗೆ ವಂಶಾವಳಿಯನ್ನು ದಾವೆಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಪ್ರತಿವಾದಿಯ ಮಾಲ್ಕಿ ಜಮೀನು ಎಂದು ನಮೂದು ಮಾಡಿದ್ದು ಅದರ ಒಟ್ಟು ಕ್ಷೇತ್ರ 02 ಎಕ್ರೆ ಮೇಲೆ ಇರಬಹುದು. *(ಪ್ರತಿವಾದಿಯ ಜಮೀನಿನ ಚಕಬಂದಿ ಕೇಳಲಾಗಿ ವಾದಿ ಪರ ವಕೀಲರು ಪ್ರತಿವಾದಿ ಜಮೀನಿನ ಚಕಬಂದಿ ವಾದಿಗೆ ಕೇಳುವ ಪ್ರಶ್ನೆ ಬರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ. ಪ್ರತಿವಾದಿ ಪರ ವಕೀಲರು ಪ್ರತಿವಾದ ಪತ್ರ 13 ನೇ ಕಂಡಿಕೆಯನ್ನು ಉಲ್ಲೇಖಿಸಿರುತ್ತಾರೆ ಆದಕಾರಣ ತಕರಾರನ್ನು ತಿರಸ್ಕರಿಸಲಾಯಿತು.)*

7) ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ನಮ್ಮ ಆಸ್ತಿ, ಸಾಕ್ಷಿಯು ಮುಂದುವರೆದು ಪೂರ್ವಕ್ಕೆ ತಳವಾರ ಜಮೀನು, ಉತ್ತರ ಹಾಗೂ ದಕ್ಷಿಣಕ್ಕೆ ಪೂಜಾರ ರವರ ಆಸ್ತಿ ಬರುತ್ತದೆ. ಹಳ್ಳವು ಪಶ್ಚಿಮದಿಂದ ಪೂರ್ವ ದಿಕ್ಕಿಗೆ ಹಾಯ್ದು ಹೋಗುತ್ತದೆ. ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಪೂಜಾರ ರವರ ಆಸ್ತಿ ಬರುತ್ತದೆ. ದಾವಾ ಆಸ್ತಿಯ ಬಗ್ಗೆ ಹಾಗೂ ಅದರ ಚಕಬಂದಿಯ ಬಗ್ಗೆ ನನಗೆ ಯಾವುದೇ ನಿಖರ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ.

8) ಅಕ್ಕಾಮಹಾದೇವಿ, ಶಿವಪ್ಪ ಹಾಗೂ ನಾನು ಶಲವಡಿಯ ದೇಸಾಯಿ ಪೇಟೆಯ ನಿವಾಸಿ ಇರುತ್ತೇವೆ. ಶಲವಡಿಯ ನಿವಾಸಿ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ತಾವು ಹಾಜರು ಪಡಿಸಿದ ದಾಖಲೆಗಳನ್ನು ನೀಡಿ ಸಾಕ್ಷಿಯು ಪರಿಶೀಲಿಸಿ

ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಾಥಮಿಕ ಹಾಗೂ ಮಾದ್ಯಮಿಕ ಶಿಕ್ಷಣವನ್ನು ಶಲವಡಿಯಲ್ಲಿ ಪೂರ್ಣಗೊಳಿಸಿರುತ್ತೇನೆ. ನಾನು 10ನೇ ತರಗತಿಯ ನಂತರದಲ್ಲಿ ಬಾಗಲಕೋಟೆ ಯಲ್ಲಿ ಐಟಿಐ ವಿದ್ಯಾಬ್ಯಾಸ ಮಾಡಿ ಸುಮಾರು 5 ವರ್ಷಗಳ ಕಾಲ ಕಳೆದಿರುತ್ತೇನೆ.

9) ಪ್ರತಿವಾದಿಯು ದಾವಾ ಆಸ್ತಿಯನ್ನು ಒಳಗೊಂಡು ತನ್ನ ಆಸ್ತಿಯನ್ನು ಆಕೆಯ ಹಿರಿಯರ ಕಾಲದಿಂದಲೇ ಒಟ್ಟುಗೂಡಿಸಿಕೊಂಡು ಇಲ್ಲಿಯವರೆಗೆ ಉಳುಮೆ ಉಪಬೋಗ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ. ನಾನು ಹಾಗೂ ನನ್ನ ಕುಟುಂಬದವರು ಎಂದಿಗೂ ಸಹ ದಾವಾ ಆಸ್ತಿಯ ಕಬ್ಜಾವಹಿವಾಟಿನಲ್ಲಿ ಬಂದಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಲಾವಣಿಗೆಂದು 1 ವರ್ಷದ ಅವಧಿಗೆ ನೀಡಿರುತ್ತೇವೆ ಸದರಿ ಸಮಯದಲ್ಲಿ ನಾನು ಜನಿಸಿರುವುದಿಲ್ಲ.

10) ನಾವು ಆಸ್ತಿಯನ್ನು ಸಾಗುವಳಿ ಮಾಡಲು ಬಹಳ ಜನರಿಗೆ ನೀಡಿರುತ್ತೇವೆ ಅವರ ಹೆಸರು ಹೇಳಲು ಬರುವುದಿಲ್ಲ. ಲಾವಣಿ ದಾಖಲೆಯ ಆದಾರದ ಮೇಲೆ ಇರುವುದಿಲ್ಲ. ನಮ್ಮ ಮನೆಯಲ್ಲಿ ಕಮತ ನಾನು ಜನಿಸಿದ ಸುಮಾರು 5-6 ವರ್ಷಗಳ ಅವಧಿಯವರೆಗೆ ಇತ್ತು. ವಾದ ಪತ್ರದಲ್ಲಿ ನಾವು ಆಸ್ತಿಯನ್ನು ಸಾಗುವಳಿ ಮಾಡಲು ಬಹಳ ಜನರಿಗೆ ನೀಡಿದ ಬಗ್ಗೆ ನಮೂದು ಮಾಡಿಲ್ಲ. ಕಳೆದ ವರ್ಷ ಜಮೀನು ಸಾಗುವಳಿ ಮಾಡಲು ಯಾರಿಗೂ ನೀಡಿರುವುದಿಲ್ಲ ನಾನೇ ಮಾಡಿರುತ್ತೇನೆ. 4-5 ವರ್ಷಗಳಿಂದ ನಾನೇ ಸಾಗುವಳಿ ಮಾಡುತ್ತಾ ಬಂದಿರುತ್ತೇನೆ. ಸಾಕ್ಷಿಯು ಮುಂದುವರೆದು ನನ್ನ ಶಿಕ್ಷಣ ಮುಗಿದ ನಂತರ ನಾನು ಸಾಗುವಳಿ ಮಾಡುತ್ತಾ ಬಂದಿರುತ್ತೇನೆ. ನಾನು 2023 ರಲ್ಲಿ ಶಿಕ್ಷಣ ಮುಗಿಸಿರುತ್ತೇನೆ. ನಾನು ಸಾಗುವಳಿ ಮಾಡುತ್ತಾ ಬಂದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**